ಸರ್ವ ಶಿಕ್ಷಣ ಅಭಿಯಾನ ಯೋಜನೆ

808 (1338) ಶ್ರೀ ಶಿವಲಿಂಗೇಗೌಡ ಕೆ. ಎಂ. (ಅರಸೀಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಪ್ರಾಥಮಿಕ ಶಿಕ್ಷಣ ಇಲಾಖೆಯ ಮಟ್ಟದಿಂದ ಪ್ರೌಢಶಾಲಾ ಶಿಕ್ಷಣದ ಮಟ್ಟಕ್ಕೆ ಕಾರ್ಯಾಚರಣೆ ಮಾಡಲು ಯೋಜನೆ ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯೋಜನೆಯ ಮಾಹಿತಿ ನೀಡುವುದು;

ಆ) ಈ ಯೋಜನೆಯನ್ನು ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಇನ್ನೂ 2 ರಿಂದ 3 ವರ್ಷಗಳವರೆಗೆ ಮುಂದುವರಿಸಲು ಸಾಧ್ಯವಿಲ್ಲವೇ; ಹಾಗಿಲ್ಲದ್ದಲ್ಲಿ, ಕಾರಣಗಳನ್ನು ನೀಡುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹೆಸರಿನ ಈ ಯೋಜನೆಯ ಪ್ರಮುಖ ಕಾರ್ಯಕ್ರಮಗಳು :

- ಅರ್ಹ ಜನವಸತಿ ಪ್ರದೇಶಗಳಲ್ಲಿ 9 ಮತ್ತು 10ನೇ ತರಗತಿ ಶಿಕ್ಷಣ ನೀಡಲು ಪೂರಕವಾಗುವಂತೆ ಶಾಲೆಗಳನ್ನು ಪ್ರಾರಂಭಿಸುವುದು.
- ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಕೊಠಡಿಗಳು ನೀಡುವುದು.
- ಪ್ರಯೋಗಾಲಯ, ಗ್ರಂಥಾಲಯ, ಆರ್ಟ್ ಮತ್ತು ಕ್ರಾಫ್ಟ್ ಕೊಠಡಿ, ಹೆಣ್ಣು ಮಕ್ಕಳ ಚಟುವಟಿಕಾ ಕೊಠಡಿ, ಶೌಚಾಲಯ ಮತ್ತು ನೀರಿನ ಸೌಲಭ್ಯಗಳನ್ನು ಅವಶ್ಯಕತೆಗಳಿಗನುಗುಣವಾಗಿ ನೀಡುವುದು.
- ಹೊಸದಾಗಿ 9ನೇ ತರಗತಿ ಪ್ರಾರಂಭಿಸುವ ಶಾಲೆಗಳಿಗೆ ಅವಶ್ಯ ಮೂಲಭೂತ ಸೌಕರ್ಯಗಳು.

- ಪ್ರತಿ ಸರಕಾರಿ ಶಾಲೆಗಳ ಕಾರ್ಯ ಚಟುವಟಿಕೆಗಳ ನಿರ್ವಹಣೆಗಾಗಿ [ಗ್ರಂಥಾಲಯ, ಪ್ರಯೋಗಾಲಯ, ಕಾರ್ಯಾಲಯ, ತರಗತಿ, ಇತರೆ ಕಾರ್ಯಕ್ರಮಗಳು] ರೂ.40,000/– ಶಾಲಾ ಅನುದಾನ.
- ಶಾಲಾ ಕಟ್ಟಡ ನಿರ್ವಹಣಾ ಅನುದಾನ – ಸ್ವಂತ ಕಟ್ಟಡ ಹೊಂದಿರುವ ಸರ್ಕಾರಿ ಶಾಲೆಗಳಿಗೆ ರೂ.25,000/– ವರೆಗೆ ವಾರ್ಷಿಕ ಅನುದಾನ.
- ಶಿಕ್ಷಕರ ಬೇಡಿಕೆಗಳಿಗನುಗುಣವಾಗಿ ಶಿಕ್ಷಕರನ್ನು ನೀಡಲಾಗುವುದು.
- ಎಲ್ಲಾ ಸರ್ಕಾರಿ ಶಾಲಾ ಶಿಕ್ಷಕರಿಗೆ ವಾರ್ಷಿಕ 5 ದಿನಗಳ ಸೇವಾನಿರತ ಶಿಕ್ಷಕರ ತರಬೇತಿ.

ಆ) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪ್ರಸ್ತುತ ಸ್ಥಿತಿಯಲ್ಲಿ ಮುಂದುವರಿಯುತ್ತಿದೆ.

ಹಾಲಿನ ದರ

810 (777) ಶ್ರೀ ಶಿವಶಂಕರರೆಡ್ಡಿ ಎನ್. ಹೆಚ್. (ಗೌರಿ ಬಿದನೂರು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಹಾಲಿನ ದರ 2.00 ರೂಪಾಯಿಗಳಿಗೆ ಹೆಚ್ಚಿಸಿರುವುದು ನಿಜವಲ್ಲವೆ;

ಆ) ಪ್ರೋತ್ಸಾಹ ಧನ ಎಷ್ಟು ತಿಂಗಳಿನಿಂದ ಬಾಕಿ ಉಳಿದಿದೆ (ಜಿಲ್ಲಾವಾರು ಮಾಹಿತಿ ನೀಡುವುದು);

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಹಾಲಿನ ಧರವನ್ನು 2.00 ರೂಪಾಯಿಗಳಿಗೆ ಹೆಚ್ಚಿಸಿರುವುದಿಲ್ಲ. ಸರ್ಕಾರ ಘೋಷಿಸಿದಂತೆ ಪ್ರತಿ ಲೀಟರ್ ಹಾಲಿಗೆ ರೂ.2.00 ರಂತೆ ಪ್ರೋತ್ಸಾಹ ಧನವನ್ನು ದಿನಾಂಕ: 9–9–2008 ರಿಂದ ಹಾಳು ಉತ್ಪಾದಕರಿಗೆ ನೀಡಲಾಗುತ್ತಿದೆ.